ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

12

h 2026

## ಆನು ಒಲಿದಂತೆ ಹಾಡುವೆ ಕನ್ನಡ ಮನಸ್ಸಿನೊಂದಿಗೆ ಕಾರ್ಯಕ್ರಮ

# ಸಾಹಿತ್ಯ ಚರಿತ್ರೆಯಲ್ಲಿ ಮಹಿಳೆಗಿಲ್ಲ ಸ್ಥಾನ

**• ಬೆಂಗಳೂರು:** ಸಾಹಿತ್ಯ ಶ್ರೀಸಾಮಾನ್ಯನದು. ಆದರೆ, ಮುಖ್ಯವಾಹಿನಿಯ ಸಾಹಿತ್ಯ ಚರಿತ್ರೆಯಲ್ಲಿ ಮಹಿಳೆಗೆ ಪ್ರಾತಿನಿಧ್ಯ ಇಲ್ಲ, ಶೋಷಿತ ಧ್ವನಿಗಳಿಲ್ಲದಾಗಿದೆ. ಅವನ್ನು ಮುಖ್ಯವಾಹಿನಿ ಸಾಹಿತ್ಯದೊಳಗೆ ತರುವ ಅಗತ್ಯವಿದೆ ಎಂದು ಪ್ರೊ.ಕೆ.ಜಿ.ನಾಗರಾಜಪ್ಪ ಹೇಳಿದರು.

ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಅಭಿನವ ಮತ್ತು ಸೈಂಟ್ ಜೋಸೆಫ್ಸ್ ವಿಶ್ವವಿದ್ಯಾನಿಲಯದ ಕನ್ನಡ ಭಾಷೆ ಮತ್ತು ಸಂಸ್ಕೃತಿ ಅಧ್ಯಯನ ಕೇಂದ್ರ ಜತೆಗೂಡಿ ಆಯೋಜಿಸಿದ್ದ ಆನು ಒಲಿದಂತೆ ಹಾಡುವೆ ಸರಣಿಯ ಕನ್ನಡ ಮನಸ್ಸಿನೊಂದಿಗೆ ಒಂದು ದಿನ ಕಾರ್ಯಕ್ರಮದಲ್ಲಿ ಮಾತನಾಡಿ, ಕನ್ನಡ ಸಂಸ್ಕೃತಿ ಹಾಳಾಗುತ್ತಿದೆ. ಅದನ್ನು ಸರಿಪಡಿಸುವ ದಾರಿಗಳು ಯಾವುವು ಎನ್ನುವುದು ಸಮಕಾಲೀನ ಪ್ರಶ್ನೆಯಾಗಿದೆ. ಇದನ್ನು ಬಹುಸಂಸ್ಕೃತಿಯ ನೆಲೆಯಲ್ಲಿ ಚರ್ಚಿಸುವುದು, ವಿಶ್ಲೇಷಿಸುವುದು ನಿಜವಾದ ಸಾಹಿತ್ಯವಾಗಿದೆ. ತಮಿಳು ನಾಡು ಕೇರಳ ಮಹಾರಾಷ್ಟ್ರಗಳಿಂದ ಕನ್ನಡಿಗರು ಕನ್ನಡ ಭಾಷೆ ಸಾಹಿತ್ಯವನ್ನು ಹೇಗೆ ಸಂರಕ್ಷಿಸಬೇಕೆಂಬುದನ್ನು ಕಲಿಯಬೇಕಿದೆ ಎಂದರು.

ಕನ್ನಡ ವಿಶ್ವವಿದ್ಯಾಲಯ ಹಂಪಿಯ ಕುಲಪತಿ ಡಾ. ಡಿ.ವಿ.ಪರಮಶಿವಮೂರ್ತಿ ಮಾತನಾಡಿ, ಕೆ.ಜಿ.ಎನ್ ರಂತಹ ವಿದ್ವಾಂಸರು ಹೊಸ ತಲೆಮಾರಿಗೆ ಒಂದು ಮಾದರಿ. ಅವರ ಸಂಸ್ಕೃತಿ ಚಿಂತನೆ ಮರುಚಿಂತನೆಯ ರೂಪದಲ್ಲಿ ವ್ಯಕ್ತಗೊಂಡಿದೆ.



ಕೆ.ಜಿ.ಎನ್. ಗುಪ್ತ ಸಮಾಜ, ಗುಪ್ತಭಕ್ತಿಯ ಧಾರೆಗಳನ್ನು ಕನ್ನಡಕ್ಕೆ ಪರಿಚಯಿಸಿದವರು. ನಿಜವಾದ ಸಾಹಿತ್ಯ ಇರುವುದು ತಂತ್ರ ಮತ್ತು ಯೋಗದಲ್ಲಿ. ಕನ್ನಡ ಸಾಹಿತ್ಯ ಅವುಗಳನ್ನು ಇದುವರೆಗೂ ಅಧ್ಯಯನ ಮಾಡಿಲ್ಲ, ನೋಡುವ ಮಾದರಿಯನ್ನು ಕೆ.ಜಿ.ಎನ್. ನಮಗೆ ಕೊಟ್ಟಿದ್ದಾರೆ ಎಂದರು.

ಸೈಂಟ್ ಜೋಸೆಫ್ಸ್ ವಿಶ್ವವಿದ್ಯಾನಿಲಯದ ಕುಲಪತಿ ರೆವರೆಂಡ್ ಡಾ.ವಿಕ್ಟರ್ ಲೋಬೊ ಮಾತನಾಡಿ, ಕನ್ನಡ ಸಂಸ್ಕೃತಿಯನ್ನು ಬೆಳೆಸುವಲ್ಲಿ ನಮ್ಮ ವಿಶ್ವವಿದ್ಯಾನಿಲಯವು ಅನೇಕ ಕನಸುಗಳನ್ನು ಕಂಡಿದೆ. ಕನ್ನಡ ಸಾಹಿತ್ಯವನ್ನು ಬೆಳೆಸುವಲ್ಲಿ ನಮ್ಮ ವಿಭಾಗವು ಅನೇಕ ಯೋಜನೆಗಳನ್ನು ಹಾಕಿಕೊಂಡಿದೆ. ಅದಕ್ಕಾಗಿ ನಾವು ಕನ್ನಡ ಭಾಷೆ ಮತ್ತು ಸಂಸ್ಕೃತಿ ಅಧ್ಯಯನ ಕೇಂದ್ರವನ್ನು ಸ್ಥಾಪಿಸಿದ್ದೇವೆ ಎಂದರು.